ಕರ್ನಾಟಕ ವಿಧಾನ ಸಭೆ

ಗುರುವಾರ 23ನೇ ಮಾರ್ಚ್ 1989

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಖಾದಿ ವಸ್ತ್ರಗಳ ದಾಸ್ತಾನಿನ ಬಗ್ಗೆ

೧೪೫(೬೫೬) ಶ್ರೀ ಜಿ. ರಾಜಾಗೌಡ (ಹನೂರು).—ಪಾಣ್ಯ ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಉಗ್ರಾಣಗಳಲ್ಲಿ ಹಾಲಿ ಎಷ್ಟು ಮೌಲ್ಯದ ಖಾದಿ ವಸ್ತ್ರಗಳು ದಾಸ್ತಾನಾಗಿವೆ?

(ಆ) ಇದನ್ನು ವಿಲೇವಾರಿ ಮಾಡಲು ಮಂಡಲಿಯು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ರಾಜ್ಯದ ಖಾದಿ ಮಂಡಲಿಯು ಖಾದಿ ವಸ್ತ್ರದ ದಾಸ್ತಾನನ್ನೇನೂ ಹೊಂದಿಲ್ಲ. ಆದರೆ ೬೬ ಖಾದಿ ಸಂಸ್ಥೆಗಳ ಗೋಡೋನಿನಲ್ಲಿ ಉಳಿದಿರುವ ಖಾದಿ ಬಟ್ಟೆಯ ಮೌಲ್ಯವು ಸುಮಾರು ೪.೫೦ ಕೋಟಿ ರೂ. ಗಳಷ್ಟಾಗಿದೆ. ಇದಲ್ಲದೆ ಖಾದಿ ಆಯೋಗವೇ ನೇರವಾಗಿ ನೆರವು ನೀಡಿರುವ ಖಾದಿ ಸಂಸ್ಥೆಗಳ ವಶದಲ್ಲಿರುವ ಆಖೈರು ಖಾದಿ ದಾಸ್ತಾನಿನ ಮೌಲ್ಯವು ಸುಮಾರು ೬ ಕೋಟಿ ರೂ.ಗಳಷ್ಟಾಗಿದೆ.

(ಆ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

೧) ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಬಟ್ಟೆ ಆವಶ್ಯಕತೆಯನ್ನು ಖಾದಿ ಬಟ್ಟೆಯನ್ನು ಕೊಳ್ಳುವುದರ ಮೂಲಕ ಭರಿಸಿಕೊಳ್ಳಲು ಆದೇಶ ನೀಡಿದೆ?

೨) ಸಾರ್ವಜನಿಕರು ಹೆಚ್ಚಾಗಿ ಖಾದಿ ಬಟ್ಟೆಯನ್ನು ಕೊಳ್ಳುವಂತೆ ಮಾಡಲು ರಾಜ್ಯ ಸರ್ಕಾರವು ಖಾದಿ ಬಟ್ಟೆ ಚಿಲ್ಲರೆ ವ್ಯಾಪಾರದ ಮೇಲೆ ವಿಶೇಷ ರಿಯಾಯಿತಿಯನ್ನು ಮಂಜೂರು ಮಾಡಿದೆ.

೩) ಬೆಂಗಳೂರು ನಗರದ ವಿವಿಧೆಡೆಗಳಲ್ಲಿ ಹಾಗೂ ರಾಜ್ಯದ ಪ್ರಮುಖ ನಗರಗಳಾದ ಹುಬ್ಬಳ್ಳಿ, ಮಂಗಳೂರು ಮುಂತಾದ ಕಡೆಗಳಲ್ಲಿ ವಿಶೇಷ ಮಾರಾಟ ಆಂದೋಳವನ್ನು ವ್ಯವಸ್ಥೆಗೊಳಿಸಿ ಆ ಮೂಲಕ ಮಾರಾಟ ಮಳಿಗೆಗಳನ್ನು ತೆರೆದು, ಈಗಾಗಲೆ ಇರುವ ಅನುದಿನದ ಕ್ರಮಬದ್ಧ ಖಾದಿ ಭಂಡಾರಗಳಲ್ಲಿ ನಡೆಯುವ ಮಾರಾಟವಲ್ಲದೇ ಈ ಬಗೆಯಲ್ಲಿಯೂ ಖಾದಿ ಮಾರಾಟವು ನಡೆಯುವಂತೆ ವ್ಯವಸ್ಥೆಗೊಳಿಸಲಾಗಿತ್ತು.

೪) ರಾಜ್ಯ ಮಂಡಲಿಯು ನೌಕರರು ಖಾದಿ ಬಟ್ಟೆಯನ್ನು ಕೊಳ್ಳಲು ಅವರಿಗೆ ಸಾಲ ಸೌಲಭ್ಯವನ್ನು ನೀಡಲಾಗಿದೆ.

೫) ಖಾದಿ ಸಂಘ ಸಂಸ್ಥೆಗಳು ಇನ್ನು ಹೆಚ್ಚಿನ ಖಾದಿ ಭಂಡಾರದ ಶಾಖೆಗಳನ್ನು ತೆರೆಯಲು ಅನುವಾಗುವಂತೆ ಅವುಗಳಿಗೆ ಬೇಕಾದ ದುಡಿಮೆ ಬಂಡವಾಳ ಮತ್ತು ಭಂಡಾರಗಳಿಗೆ ಬೇಕಾದ ಪೀಠೋಪಕರಣಗಳಿಗಾಗಿ ಹಣಕಾಸಿನ ನೆರವನ್ನು ಖಾದಿ ಮಂಡಲಿಯು ನೀಡುವುದು.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಈ ಖಾದಿಯನ್ನು ಸರ್ಕಾರಿ ಇಲಾಖೆಗಳು ಆದರಲ್ಲೂ ಕೂಡ ವಿಶೇಷವಾಗಿ ಆರೋಗ್ಯ ಇಲಾಖೆ ಕೊಂಡುಕೊಳ್ಳಬೇಕು ಎಂದು ಸರ್ಕಾರದ ಆಜ್ಞೆ ಆಗಿದೆಯೇ? ಹಾಗಿದ್ದರೆ, ಆ ಆಜ್ಞೆ ಪರಿಣಾಮಕಾರಿಯಾಗಿ ಜಾರಿ ಆಗಿದೆಯೇ. ೧೯೮೭-೮೮ ರಲ್ಲಿ ಈ ಖಾದಿ ಸಂಸ್ಥೆಗಳು ಸಾರ್ವಜನಿಕರಿಗೆ ಕೊಟ್ಟಿರತಕ್ಕ ರಿಬೇಟ್ ಮೊತ್ತ ಎಷ್ಟು, ಸರ್ಕಾರ ಆ ಮೊತ್ತವನ್ನು ತುಂಬಿದೆಯೇ, ತುಂಬದೇಹೋದರೆ ಯಾವಾಗ ತುಂಬುತ್ತಾರೆ. ಖಾದಿ ಸಂಸ್ಥೆಗಳಲ್ಲಿ ಹರಿಜನರು ಮತ್ತಿತರರು ೩೬ ಸಾವಿರ ಜನ ಕೆಲಸ ಮಾಡುತ್ತಾ ಇದ್ದಾರೆ. ಆದ್ದರಿಂದ ರಿಬೇಟ್ ತುಂಬದೇ ಹೋದರೆ ಅವರ ಹೊಟ್ಟೆ ಮೇಲೆ ಹೊಡೆದ ಹಾಗೆ ಆಗುತ್ತದೆ. ಇದು ಸರ್ಕಾರದ ನೀತಿ ಆಗಿದೆಯೇ ಹೇಗೆ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈಗಾಗಲೇ ನಾನು ಹೇಳಿರುವ ಹಾಗೆ ಕರ್ನಾಟಕ ಸರ್ಕಾರದವರು ೧೯೮೦ರಲ್ಲಿ ಸರ್ಕಾರದ ಇಲಾಖೆಗಳಲ್ಲಿ ಅವರಿಗೆ ಬೇಕಾದ ಸಮವಸ್ತ್ರಗಳಿಗೆ ೫೦ ಪರ್ಸೆಂಟ್ ಖಾದಿ, ೫೦ ಪರ್ಸೆಂಟ್ ಹ್ಯಾಂಡ್‌ಲೂಂ ಬಟ್ಟೆಯನ್ನು ಕಡ್ಡಾಯವಾಗಿ ಪರ್ಚೇಸ್ ಮಾಡಬೇಕು ಎಂದು ಒಂದು ಆಜ್ಞೆ ಹೊರಡಿಸಿದ್ದಾರೆ. ಆ ಆಜ್ಞೆ ಪ್ರಕಾರ ಬೇರೆ ಎಲ್ಲಾ ಇಲಾಖೆಯವರು ಖಾದಿ ಬಟ್ಟೆಯನ್ನು ಕೊಳ್ಳುತ್ತಾ ಇದ್ದಾರೆ. ರೀಸೆಂಟಾಗಿ ಜೈಲಿನವರು ಸಮವಸ್ತ್ರಗಳಿಗೆ ಇಂತಿಷ್ಟು ಬಟ್ಟೆ ಬೇಕು ಎಂದು ಆರ್ಡರ್ ಕಳಿಸಿದ್ದಾರೆ. ಆದರೆ ರಿಬೇಟ್ ಮೊತ್ತ ಎಷ್ಟು ನಿಂತಿದೆ ಎಂಬ ಸಂಖ್ಯೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಆ ಸಂಖ್ಯೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಟ್ಟು ಕಳಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಕೇಂದ್ರ ಸರ್ಕಾರದವರು ನೇರವಾಗಿ ಶೇಕಡಾ ೬೦ ರಷ್ಟು ಮುಂಗಡ ರಿಬೇಟ್ ಕೊಡುತ್ತಾರೆ. ರಾಜ್ಯ ಸರ್ಕಾರದವರು ಅದನ್ನು ಏಕೆ ಪಾಲಿಸಬಾರದು? ಇದನ್ನು ಮಾಡದೇಹೋದರೆ ಕೆಲಸ ಹೇಗೆ ಚೆನ್ನಾಗಿ ಮಾಡುವುದಕ್ಕಾಗುತ್ತದೆ? ಆದ್ದರಿಂದ ತಾವು ಇದನ್ನು ವ್ಯವಸ್ಥೆ ಸೂಡಲಿಕ್ಕೆ ಆಗುತ್ತದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಗ್ಗೆ

೧೪೬ (೩೮೫) **ಶ್ರೀ ಬಿ. ಎಸ್. ಬಾಗಲಕೋಟೆ (ಜಮಖಂಡಿ).**—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಕೈಮಗ್ಗ ಅಭಿವೃದ್ಧಿ ನಿಗಮವನ್ನು ಎಂದು ಪ್ರಾರಂಭಿಸಲಾಯಿತು?

ಆ) ಪ್ರಾರಂಭದಲ್ಲಿ ನಿಗಮದ ಕೆಳಗೆ ಕೆಲಸ ಮಾಡುತ್ತಿರುವ ನೇಕಾರರ ಸಂಖ್ಯೆ, ಎಷ್ಟು ಹಾಗೂ ಉತ್ಪಾದಿಸುತ್ತಿದ್ದ ಅರಿವೆ ಎಷ್ಟು, ಅದರ ಬೆಲೆ ಎಷ್ಟು, ಮತ್ತು ನೇಕಾರರಿಗೆ ಕೊಡುತ್ತಿದ್ದ ಪಗಾರವೆಷ್ಟು?

ಇ) ೧೯೮೬ ರಿಂದ ಜನವರಿ ೧೯೮೯ರ ವರೆಗಿನ ಪ್ರಗತಿಯ ವಿವರ ನೀಡಲಾಗುವುದೇ.

ಈ) ಕಳೆದ ೧-೨-೧೯೮೯ರಿಂದ ವಿಜಾಪುರ ಜಿಲ್ಲೆಯ ಅನೇಕ ಕಡೆ ತಮ್ಮ ಬೇಡಿಕೆ ಮುಂದಿಟ್ಟು ಈ ಕೈಮಗ್ಗ ನೇಕಾರರು ಸತ್ಯಾಗ್ರಹ ಮಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದರೆ, ಈ ನೇಕಾರರ ಬೇಡಿಕೆ ಪೂರೈಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?